ಶ್ರೀ ಆಲೂರು ಹನುಮಂತಪ್ಪ.—ಅಧಿಕಾರಿಗಳಿಗೆ ಆ ರೀತಿ ಜಿಮ್ಮೀನು ಕೊಡುವ ಅಧಿಕಾರ ಏಲ್ಲ, ಅಂಥವು ಸರ್ಕಾರಕ್ಕೆ ಬರಬೇಕು. ಹಿಂದೆ ಒಂದು ವೇಳೆ ಕೊಟ್ಟಿದ್ದರೆ ಏಕ್‌ಸಾರ್ ಬೇಸಿಸ್ ಮೇರೆ ಕೆಲವು ಜಿಲ್ಲೆಗಳಲ್ಲಿ ಸರ್ಕಾರದ ವತಿಯಿಂದ ಮಾತ್ರ ಕೊಟ್ಟಿದೆ, ಅಧಿಕಾರಿಗಳು ಆ ರೀತಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಕಡೆ ಅನಧಿಕೃತವಾಗಿ ಒತ್ತುವರಿಯಾಗಿರಬಹುದು. ರೆವೆನ್ಯೂ ಮಂತ್ರಿಗಳು ಮತ್ತು ನಾವು ಎಲ್ಲರೂ ಸೇರಿ ಇಂಥದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎನ್. ಜಿ. ಹಾಲಪ್ಪ.—ಅರ್ಜಿ ಸರ್ಕಾರಕ್ಕೆ ಬಂದ ತರೀಖಿನ್ನು ತಿಳಿಸುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—5-6-1968ರಲ್ಲಿ ಒಬ್ಬರಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಬಂದಿದೆ. ಈಚೆಗೆ ಎಂದರೆ ಏಪ್ರಿಲ್, ಮೇ ತಿಂಗಳಿನಲ್ಲಿ ಸರ್ಕಾರಕ್ಕೆ ಅರ್ಜಿ ಬಂದಿದೆ. ಅವುಗಳ ಬಗ್ಗೆ ಅಸಿಸ್ಟೆಂಟ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಮತ್ತು ಸರ್ವೆ ಇಲಾಖೆಯವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಎಚ್. ಬಿ. ಚ್ಯಾಲನಯ್ಯ.—ಸರಕಾರಿ ಕಾಡನ್ನು ಕಡಿದು ಇದ್ದಲು ತಯಾರಿಸುತ್ತಿರುವ ಬಗ್ಗೆ ಸಾಕ್ಷಿ, ಪುರಾವೆ ಒದಗಿಸಿದರೆ ವಿಜಿಲೆನ್ಸ್ ಕಮಿಷನ್ನಿಗೆ ತನಿಖೆಗೆ ಕಳಿಸುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿಗೆ ಕಳುಹಿಸಬೇಕಾಗಿಲ್ಲ. ಇಲಾಖೆಯಿಂದ ಸರ್ವೆ ಮಾಡಿಸಿ ಅನ್‌ಅಥರೈಜ್ಡ್ ಕಲ್ಟಿವೇಷನ್ ಇದ್ದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಈಗಿರುವ ಕಾನೂನಿನ ಪ್ರಕಾರ ಇಂಥ ಕೇಸುಗಳನ್ನು ಬುಕ್ ಮಾಡುವುದಕ್ಕೆ ಮತ್ತು ಎವಿಕ್ಟ್ ಮಾಡುವುದಕ್ಕೆ ಅರಣ್ಯ ಇಲಾಖೆಗೆ ಮತ್ತು ರೆವೆನ್ಯೂ ಇಲಾಖೆಗೆ ಅಧಿಕಾರವಿದೆ. ಈ ಬಗ್ಗೆ ರೆವಿನ್ಯೂ ಸಚಿವರು ಒಂದು ಕಾನೂನನ್ನು ತರುವುದಾಲ್ಲದ್ದಾರೆ, ಅರಣ್ಯದಲ್ಲಿ ಎಲ್ಲಾದರೂ ಎನ್‌ಕ್ರೋಚ್ ಆಗಿರುವುದು ಕಂಡುಬಂದರೆ ತಿಳಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಬಿ. ಆರ್. ಧನಂಜಯ.—ಫಾರೆಸ್ಟ್ ಇಲಾಖೆಯಿಂದ ಹರಿಜನರಿಗೆ ಕೊಟ್ಟಿರುವ ಜಮೀನನ್ನು ಅವರು ಮಾರಿಕೊಂಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಮ್ಯಾಚ್ ಫ್ಯಾಕ್ಟರಿಗೆ ಪ್ರತಿ ವರ್ಷ ಸಾಫ್ಟ್ ವುಡ್ ಸಾಗಿಸಲು ಅವಕಾಶ ಕೊಟ್ಟಿರುವುದರಿಂದ ಆ ನೆವದಲ್ಲಿ ಬೇರೆ ಒಳ್ಳೆಯ ಮರಗಳನ್ನು ಕೂಡ ಕಡಿದು ಸಾಗಿಸುವುದು ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಮ್ಯಾಚ್ ಫ್ಯಾಕ್ಟರಿಯವರಿಗೆ ಅವಕಾಶ ಕೊಡದಂತೆ ಕಾನೂನು ಮಾಡುವಿರಾ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳಿದ್ದಾರೆ ಮತ್ತು ಸ್ಕ್ವಾಡ್ ಇದೆ, ಅವರು ನೋಡುತ್ತಾರೆ. ಒಂದು ವೇಳೆ ಅಂಥ ಸರ್ಚ್ ಮಾನ ಸದಸ್ಯರಿಗೆ ಅಥವಾ ಇತರರಿಗೆ ತಿಳಿದರೆ ಅದನ್ನು ತಿಳಿಸಿದರೆ ಉಗ್ರ ಕ್ರಮ ಕೈಕೊಳ್ಳುತ್ತೇವೆ.

Mr. SPEAKER.—Question Hour is over.

SHORT NOTICE QUESTION AND ANSWER

Increasing the Seats in Agricultural Colleges in the State

42. Sri H. SIDDAVEERAPPA (Harihar).—
Sri N. G. HALAPPA (Channagiri).—
Sri G DUGGAPPA (Bharamasagara).—

Will the Minister for Agriculture be pleased to state :—

(*a*) the total number of applications received for admission in the Agricultural Colleges in the State :

(*b*) the number of seats available for admission in the colleges for the First Year B.Sc. (Agri) :

(SRI H. SIDDAVEERAPPA)
(SRI N. G. HALAPPA)
(SRI G. DUGGAPPA)

(*c*) whether it is not a fact that there is heavy rush for admission in the Agricultural Colleges this year;

(*d*) whether there is a proposal before Government to increase the number of seats in the Agricultural Colleges in the State in view of the large number of applications received for admission in these colleges?

Sri B. RACHAIAH (Minister for Agriculture).—

(*a*) 2,469 for this year.

(*b*) 320.

(*c*) Yes.

(*d*) The proposal received recently in this regard from the University of Agricultural Sciences is under consideration of Government.

Sir, there is one amendment to the reply. Now the Government have decided to increase 40 seats in Dharwar College and 20 seats in Hebbal College.

Sri H. SIDDAVEERAPPA.—Will the Government consider the necessity or the advisability of increasing the number of seats if the demand is still more?

† Sri B. RACHAIAH.—Government have examined all aspects; such as, sufficient accommodation for running the classes, enough laboratory facility, etc. Last year we increased the seats by 100 and this year by 60. There is no further scope for expansion during the current year.

Sri G. DUGGAPPA.—ಯಾವ ಯಾವ ಕಾಲೇಜಿನಲ್ಲಿ ಎಷ್ಟು ಸೀಟುಗಳನ್ನು ಹೆಚ್ಚು ಮಾಡಲಾಗಿದೆ ಎಂದು ವಿವರ ಹೇಳುವಿರಾ?

Sri B. RACHAIAH.—In Dharwar College 40 seats have been increased and in Hebbal College 20.

ಶ್ರೀ ಎಲ್. ಶ್ರೀಕಂಠಯ್ಯ:— ಕೃಷಿ ವಿಜ್ಞಾನ ಬಹಳ ಮಂದಿ ಯುವಕರನ್ನು ಆಕರ್ಷಿಸಿರುವುದರಿಂದ ಡಿಸ್ಟಿಂಕ್ಷೋರ್ಸಿಗೆ ಹೆಚ್ಚಿನ ಸೌಕರ್ಯವನ್ನು ಹಂಗಿಸುವುದಕ್ಕೋಸ್ಕರ ಡಿಪ್ಲೋಮಾ ಕೋರ್ಸು ಮತ್ತು ಸರ್ಟಿಫಿಕೇಟ್ ಕೋರ್ಸ್ ಸ್ಥಾಪನೆ ಮಾಡುವುದಕ್ಕೆ ಮನಸ್ಸು ಮಾಡುತ್ತೀರಾ?

Sri B. RACHAIAH.—It is a suggestion for action.

Sri S. R. BOMMAI.—Is there any representation from Karnatak University Area from legislators and public that the admission to the University of Agricultural Sciences is less because it is made on merit basis, and what action the Government is going to take to do justice to this area?

Sri B. RACHAIAH.—There is one Agricultural University and there are two constituent colleges. Seats cannot be divided collegewise. But,

on the representation made by the legislators of that area, this year Government has suggested to the University of Agricultural Sciences to conduct a test for all the students seeking admission to these colleges, and 30 per cent of the marks are earmarked for conducting the test and 10 per cent for *viva voce*. So, if the sons of agriculturists are well-versed in the subjects, they will certainly do well in the common test and *viva voce*. By this, we will be able to give representation to Karnatak University areas also.

ಶ್ರೀ ಎನ್. ಜಿ. ಹಾಲಪ್ಪ.—ಹಳ್ಳಿಗಾಡಿನಲ್ಲಿರತಕ್ಕ ರೈತರ ಮಕ್ಕಳಿಗೆ ಹೆಚ್ಚು ಪ್ರಾತಿನಿಧ್ಯ ಕೊಡತಕ್ಕ ರೀತಿಯಲ್ಲಿ ಈ ಅಗ್ರಿಕಲ್‌ಚರಲ್ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದೇ ಉದ್ದೇಶದಿಂದಲೇ ಹಿಂದಿನ ಪರೀಕ್ಷೆಯಲ್ಲಿ ಪಡೆದಂತಹ ಅಂಕೆಗಳನ್ನು ಗಣನೆಗೆ ತೆಗೆದುಕೊಳ್ಳದೆ 10 ಪರ್ಸೆಂಟ್ ವೈವಾ ವೋಸಿ ಮತ್ತು 30 ಪರ್ಸೆಂಟ್ ಬೇಸಾಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಹೇಳಿ ಅದರಲ್ಲಿ ಯಾವ ಪ್ರಕಾರ ಉತ್ತರ ಕೊಡುತ್ತಾರೆ ಎಂಬುದನ್ನು ನೋಡಿಕೊಂಡು ಒಟ್ಟು 40 ಪರ್ಸೆಂಟ್ ಆಧಾರದ ಮೇಲೆ ಅಡ್ಮಿಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರೀಕ್ಷೆಯಲ್ಲಿ ತೆಗೆದುಕೊಂಡಂತಹ ಅಂಕೆಗಳನ್ನು ಪರಿಗಣಿಸದೆ, ಪರೀಕ್ಷೆಯಲ್ಲಿ ಪಾಸ್ ಆಗಬೇಕೆಂಬ ಮಿನಿಮಂ ಕ್ವಾಲಿಫಿಕೇಷನ್ ಇಟ್ಟುಕೊಂಡು ಅಗ್ರಿಕಲ್ಚರಲ್ ಬಯಾಸ್ ಏನಿದೆ ಅದರಲ್ಲಿ ಚೆನ್ನಾಗಿ ತರಹೇತಾದವರನ್ನು ತೆಗೆದುಕೊಳ್ಳುವ ಸೂಕ್ತಾ ಸೂಕ್ತತೆಯನ್ನು ಪರೀಕ್ಷೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—45 ಪರ್ಸೆಂಟ್‌ಗಿಂತ ಕಡಿಮೆ ಬಂದವರನ್ನು ತೆಗೆದುಕೊಂಡರೆ ಚೆನ್ನಾಗಿ ಬರೆಯತಕ್ಕ ಒಂದು ಶಕ್ತಿ ಅವರಲ್ಲಿ ಇರಲಾರದು ಎಂಬ ದೃಷ್ಟಿಯಿಂದ ಬೇರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲೂ ಕೂಡ ಮಿನಿಮಂ 45 ಪರ್ಸೆಂಟ್ ಇರಬೇಕೆಂದು ಮಾಡಿದ್ದಾರೆ. ಇದು ಕಡಿಮೆ ಮಾಡುವುದಕ್ಕೆ ಸಾಧ್ಯವೇ ಅಂತ ಹೇಳಿದಾಗ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇದನ್ನು ಇತರ ಯೂನಿವರ್ಸಿಯವರು ಮತ್ತು ನಾವೂ ಕೂಡ ಮಾಡಬೇಕಾಗಿರುವುದರಿಂದ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಯೋಜನೆಗಳನ್ನೆಲ್ಲಾ ಕೇಂದ್ರ ಸರ್ಕಾರದವರೇ ವಹಿಸುತ್ತಾ ಇರುವುದರಿಂದ, ಅದಕ್ಕೆ ಸಂಬಂಧಪಟ್ಟ ಐ.ಸಿ.ಆರ್. ಅವರು ಮಿನಿಮಂ ಮಾರ್ಕ್ಸ್ ಕಡಮೆ ಮಾಡುವುದಕ್ಕೆ ಈ ವರ್ಷ ಒಪ್ಪಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಅಗ್ರಿಕಲ್ಚರಲ್ ಕಾಲೇಜಿನ ಸೀಟುಗಳ ಜೊತೆಗೆ, ಬಿ.ಎಸ್.ಸಿ. ಫಿಶರೀಸ್‌ನಲ್ಲೂ ಕೂಡ ಸೀಟುಗಳನ್ನು ಜಾಸ್ತಿ ಮಾಡುತ್ತೀರಾ ? ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ ? 40 ಪರ್ಸೆಂಟ್‌ಗೆ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಬಿ.ಎಸ್.ಸಿ. ಫಿಷರೀಸ್‌ಗೆ 10 ಸೀಟುಗಳನ್ನು ಜಾಸ್ತಿ ಮಾಡಿಕೊಂಡಿದ್ದೇವೆ. ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಇನ್‌ಸ್ಟಿಟ್ಯೂಟಿನಲ್ಲಿ 20 ಸೀಟ್ಸ್ ಜಾಸ್ತಿ ಮಾಡಿದ್ದೇವೆ. ಈ ವರ್ಷ 20 ಸೀಟುಗಳು ಮತ್ತೆ ದೊರೆಯುತ್ತವೆ. ಇದರಿಂದ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿದಂತಾಗಿದೆ. ರಿಸರ್ವೇಷನ್—ಷೆಡ್ಯೂಲ್ ಕ್ಯಾಸ್ಟ್ಸ್‌ಗೆ 15 ಪ್ಲಸ್ 3 ಅಲ್ಲೂ ಕೂಡ ಅನ್ವಯಿಸುತ್ತದೆ. 40 ಪರ್ಸೆಂಟ್ ಬಾರವಿರತಕ್ಕವರಿಗೂ ಸೀಟನ್ನು ಕೊಡತಕ್ಕ ವಿಚಾರದಲ್ಲಿ ಅದು ಸಾಧ್ಯವಿಲ್ಲವೆಂಬುದನ್ನು ತಿಳಿಸಬೇಕಾಗಿದೆ. ಇತ್ತೀಚೆಗೆ ಹರಿಜನರಲ್ಲೂ ಸೀಟುಗಳಿಗೆ ಕಾಂಪಿಟಿಷನ್ ಹೆಚ್ಚುತ್ತಿದೆ. ಅಗ್ರಿಕಲ್ಚರಲ್‌ಯೂನಿವರ್ಸಿಟಿಗೆ ಹರಿಜನರಿಂದ 103 ಅಪ್ಲಿಕೇಷನ್‌ಗಳು ಬಂದಿದ್ದವು. ಆ ಪೈಕಿ 46 ಜನಕ್ಕೆ ಮಾತ್ರ ಸೀಟ್ ಸಿಕ್ಕಿದೆ. ಅಲ್ಲಿಯೂ ಕೂಡ ನಾವು ಮೆರಿಟ್ಟನ್ನು ಅನುಸರಿಸಿ ಸೀಟನ್ನು ಹಂಚಬೇಕಾಗಿದೆ.

ಶ್ರೀ ಶರಣಗೌಡ ಇನಾಂದಾರ್.—ಮೆರಿಟ್‌ಮೇಲೆಯೇ ಅಡ್ಮಿಷನ್ ಕೊಡಬೇಕಾಗುತ್ತದೆಂದು ಮಾನ್ಯ ಸಚಿವರು ತಿಳಿಸಿದರು. ಆದರೆ ಅದರಲ್ಲಿ ಒಂದು ದೊಡ್ಡ ನ್ಯೂನತೆ ಏನಿದೆ ಎಂದರೆ ಪಿ.ಯು.ಸಿ. ಇಂದ ಪಾಸಾಗಿ ಕಾಲೇಜಿಗೆ ಸೇರಲು ಬರತಕ್ಕ ವಿದ್ಯಾರ್ಥಿಗಳಿಗೆ ಒಂದೊಂದು ಕಾಲೇಜಿನಲ್ಲಿ ಅವರು ಪಾಸಾಗುವುದಕ್ಕೆ ಪಡೆಯಬೇಕಾದ ಅಂಕೆಗಳು ಒಂದೊಂದು ರೀತಿಯಾಗಿರುತ್ತವೆ. ಕರ್ಣಾಟಕ ಯೂನಿವರ್ಸಿಟಿಯಲ್ಲಿ ಸೈನ್ಸ್ ಸಬ್‌ಜೆಕ್ಟ್ಸ್ ಜೊತೆಗೆ ಮ್ಯಾಥಮ್ಯಾಟಿಕ್ಸ್ ಕೂಡ ಇರುವುದರಿಂದ ಅವರು ಬೇರೆ ಕಾಲೇಜಿನವರಿಗಿಂತ 250 ನಂಬರುಗಳು ಉಳ್ಳ ಹೇಪರುಗಳನ್ನು ಹೆಚ್ಚಿಗೆ ತೆಗೆದು

(ಶ್ರೀ ಶರಣಗೌಡ ಇನಾಂದಾರ್)

ಕೊಂಡು ಪಾಸಾಗಬೇಕಾಗಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಒಟ್ಟು 600 ನಂಬರುಗಳ ಪರೀಕ್ಷೆ ತೆಗೆದುಕೊಳ್ಳಬೇಕಾಗಿದ್ದರೆ ಕರ್ನಾಟಕ ಯೂನಿವರ್ಸಿಟಿಯ ವಿದ್ಯಾರ್ಥಿಗಳು 850 ನಂಬರುಗಳ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. ಈ ತೊಂದರೆ ಇರುವುದರಿಂದ ಇದನ್ನು ನಿವಾರಣೆ ಮಾಡುವುಕ್ಕೆ ಸರ್ಕಾರದವರೇನು ಕ್ರಮ ಕ್ಕೆಗೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಜಿಲ್ಲಾವೈಜ್ ಮತ್ತು ರೀಜನ್‌ವೈಜ್ ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಅದಕ್ಕಾಗಿಯೇ ನಾವೀಗ ಎಲ್ಲ ವಿದ್ಯಾರ್ಥಿಗಳಿಗೂ ಒಂದು ಕಾಮನ್ ಎಗ್ಸಾಮಿನೇಷನ್ ಮಾಡಿ ಸರಿಕ್ಕೆ ಮಾಡಬೇಕೆಂದು ಮಾಡಿದ್ದೇವೆ.

Sri SHARANGOUDA INAMDAR.—Sir, my question is that the students of Karnatak University have to take examination for 850 marks while the students of Mysore and Bangalore Universities have to take examination for 600 marks only. in view of this difficulty, either the Hon. Minister should direct the Karnatak University to remove 'Mathematics' paper in P.U.C. or reduce the *minimum percentage of marks or* reserve seats for those candidates regionwise ?

Sri B. RACHAIAH.—Seats cannot be reserved regionwise. We could only suggest to the University to have a common syllabus.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ರಾಜ್ಯದಲ್ಲಿ ವ್ಯವಸಾಯದಲ್ಲಿ ನಿರತರಾಗಿಕ್ಕ ಜನ ಸುಮಾರು ಶೇ. 75 ರಷ್ಟು ಇರುವುದರಿಂದ ಇಲ್ಲಿ ವ್ಯವಸಾಯ ಪದವೀಧರರ ಅಗತ್ಯ ಹೆಚ್ಚಾಗಿದೆ. ಆದ್ದರಿಂದ ಇಲ್ಲಿ ಇನ್ನೂ ಹೆಚ್ಚಿಗೆ ವ್ಯವಸಾಯದ ಕಾಲೇಜುಗಳನ್ನು ತೆರೆಯುವುದಕ್ಕೆ ಪ್ರಯತ್ನವಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೆಲವು ವರ್ಷಗಳ ಹಿಂದೆ ಹೀಗೆಯೇ ಆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಸೀಟುಗಳಿಗೆ ಬಹಳ ಡಿಮ್ಯಾಂಡ್ ಇತ್ತು. ಈಗ ಆ ಇಂಜನಿಯರಿಂಗಿಗೆ ಅಷ್ಟು ಒತ್ತಡ ವಿದ್ದಂತೆ ಕಾಣುವುದಿಲ್ಲ. ಆದ್ದರಿಂದ ಈ ದಿವಸ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಿದ್ದಾರೆಂದು ಅದಕ್ಕಾಗಿ ಹೆಚ್ಚು ಅಗ್ರಿಕಲ್ಚರಲ್ ಕಾಲೇಜುಗಳನ್ನು ತೆರೆಯಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ ಅದು ಸಾಧ್ಯವೂ ಇಲ್ಲ.

ಶ್ರೀಮತಿ ಕೆ. ಲೀಲಾವತಿ ರೈ.—ಅಗ್ರಿಕಲ್‌ಚರಲ್ ಕಾಲೇಜಿಗೆ ತುಂಬಾ ರಷ್ ಇದೆಯೆಂದು ಕಂಡುಕೊಂಡು, ಅಗ್ರಿಕಲ್‌ಚರಲ್ ಕ್ಲಾಸ್ ಸೇಕಡ 85ರಷ್ಟು ಇರುವಾಗ ಅಂತಹವರ ಮಕ್ಕಳಿಗೆ ರಿಜರ್‌ವೇಷನ್ ಅಲ್ಲಿ ಮಾಡುವ ಅಭಿಪ್ರಾಯವಿದೆಯೇ ? ಆ ರೀತಿ ರಿಜರ್‌ವೇಷನ್ ಇಡುವುದಾದರೆ, ಎಷ್ಟು ಪರ್ಸಂಟೇಜ್ ಇಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಆ ರೀತಿ ಇಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಈಗ ವ್ಯವಸಾಯ ಸಚಿವರು ಹೇಳಿದರು, ಇಂಜಿನೀಯರಿಂಗ್ ವಿದ್ಯಾಭ್ಯಾಸಕ್ಕೆ ಬರುವುದು ಕಡಿಮೆಯಾಗಿದೆ ಅಗ್ರಿಕಲ್‌ಚರಲ್ ವಿದ್ಯಾಭ್ಯಾಸಕ್ಕೆ ಒತ್ತಡ ಜಾಸ್ತಿಯಾಗಿದೆ ಎಂದು ಹಾಸನದಲ್ಲಿ ಇಂಜಿನೀಯರಿಂಗ್ ಕಾಲೇಜು ಇದೆ. ಮಲೆನಾಡಿನವರಿಗೆ ಅನುಕೂಲವಾಗುವ ದೃಷ್ಟಿಯಿಂದ ಆ ಕಾಲೇಜಿನಲ್ಲಿ ಕೂಡಲೇ ವ್ಯವಸಾಯ ಕಾಲೇಜನ್ನೂ ಸಹ ಪ್ರಾರಂಭ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ನಾನು ಅದಕ್ಕೆ ಮೊದಲೇ ಉತ್ತರ ಹೇಳಿದ್ದೇನೆ. ಎಷ್ಟು ವ್ಯವಸಾಯ ಕಾಲೇಜುಗಳು ಇರಬೇಕು, ಎಷ್ಟು ಜನ ವ್ಯವಸಾಯ ಪದವೀಧರರು ಇರಬೇಕೆಂಬುದನ್ನು ಪ್ಲಾನಿಂಗ್ ಕಮಿಷನ್ನಿನವರು ಮತ್ತು ಐ.ಸಿ.ಎ.ಆರ್. ಅವರು ಕನ್‌ಸಿಡರ್ ಮಾಡಿ ಇಷ್ಟೇ ಇರಬೇಕೆಂಬುದನ್ನು ಗೊತ್ತು ಮಾಡಿದ್ದಾರೆ. ನಾಲ್ಕನೆಯ ಯೋಜನೆಯಲ್ಲಿ ವ್ಯವಸಾಯ ವಿಶ್ವವಿದ್ಯಾನಿಲಯಗಳ ಖರ್ಚನ್ನು ಕೇಂದ್ರ ಸರ್ಕಾರದವರು ವಹಿಸಿರುವುದರಿಂದ ಇನ್ನು ಮುಂದೆ ಹೊಸ ಕಾಲೇಜುಗಳನ್ನು ತೆಗೆಯಬೇಡಿ ಎಂದು ಹೇಳಿದ್ದಾರೆ. ಖಾಸಗೀಯವರು ಮುಂದೆ ಬಂದರೂ ಅವರ ಪರ್ಮಿಷನ್ ಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಂಜನಿಯರಿಂಗ್ ಕಾಲೇಜ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಅವಕಾಶವಿದೆ, ಆದರೆ ವ್ಯವಸಾಯ ಕಾಲೇಜಿನಲ್ಲಿ ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲ. ಏತಕ್ಕೆ ?

ಶ್ರೀ ಬಿ. ರಾಚಯ್ಯ.—ನಮ್ಮ ಹೆಣ್ಣುಮಕ್ಕಳು ಸುಖವಾಗಿ ಇರಲಿ ಎಂದು ನಮ್ಮ ಉದ್ದೇಶ.

ಶ್ರೀ ಬಿ. ದೊಡ್ಡಬೈರೇಗೌಡ.—ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಜಿಲ್ಲಾವಾರು ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲವೆಂದು ಉಚ್ಚ ನ್ಯಾಯಾಲಯದವರು ಹೇಳಿವ್ದಾರೆ. ಅದೇ ಮನೋಭಾವನೆಯನ್ನು ಮೆಡಿಕಲ್ ಕಾಲೇಜಿಗೂ ಅನ್ವಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಜಿಲ್ಲಾವಾರು ಮೆಡಿಕಲ್ ಕಾಲೇಜುಗಳು ಇಲ್ಲ. ಯೂನಿವರ್ಸಿಟಿವೈಜ್ ಮಾತ್ರ ಮಾಡಿದ್ದೇವೆ. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಎರಡು ಯೂನಿವರ್ಸಿಟಿಗಳು ಇಲ್ಲ. ಒಂದೇ ಯೂನಿವರ್ಸಿಟಿ ಇರುತ್ತದೆ. ಆದ್ದರಿಂದ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಅಗ್ರಿಕಲ್‌ಚರಲ್ ಕಾಲೇಜುಗಳ ಸೀಟುಗಳನ್ನು ಪರಿಮಿತಿಗೊಳಿಸಿದ್ದೇವೆಂದು ಹೇಳಿದರು. ಒಕ್ಕಲಿಗರ ಮಕ್ಕಳಿಗೆ ನಿಜವಾಗಿ ವ್ಯವಸಾಯ ಶಿಕ್ಷಣ ಕೊಡುವುದಕ್ಕಾಗಿ ಹೆಚ್ಚಿಗೆ ಇನ್ನೂ ಕಾಲೇಜುಗಳನ್ನು ತೆಗೆಯುತ್ತೀರಾ ?

ಶ್ರೀ ಬಿ. ರಾಚಯ್ಯ.—ಒಕ್ಕಲುತನ ಮಕ್ಕಳಿಗೆ ಹೆಚ್ಚಿಗೆ ವ್ಯವಸಾಯ ವಿದ್ಯಾಭ್ಯಾಸ ದೊರಕಲಿ ಎಂಬ ಉದ್ದೇಶದಿಂದ ಕಳೆದ ವರ್ಷ 100 ಸೀಟುಗಳನ್ನು ಮೊದಲನೆಯ ತರಗತಿಯಲ್ಲಿ ಹೆಚ್ಚಿಸಿದ್ದೇವೆ. ಈ ವರ್ಷ 60 ಸೀಟುಗಳನ್ನು ಹೆಚ್ಚಿಸಿದ್ದೇವೆ. ಅಂದಮೇಲೆ 160 ಹೊಸ ಸೀಟುಗಳನ್ನು ಮಾಡಿದಂತಾಗಿದೆ. ಅಗ್ರಿಕಲ್‌ಚರಲ್ ಇಂಜಿನಿಯರಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಫಿಷರಿ ಕಾಲೇಜುಗಳನ್ನು ಹೊಸದಾಗಿ ತೆರೆದಿದ್ದೇವೆ. ಕೃಷಿ ವಿಶ್ವವಿದ್ಯಾನಿಲಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳನ್ನು ತೆಗೆದಿದ್ದಾರೆ. ಆದರೂ ಅವರು ತಮ್ಮ ಭೂಮಿಯು ಮೇಲೆಯೇ ನಿಲ್ಲುತ್ತಾರೆಂಬ ನಂಬಿಕೆಯೂ ಇಲ್ಲ. ಕೆಲವರು ಈಗಾಗಲೇ ಹೋಗುತ್ತಿದ್ದಾರೆ. ಜಿಲ್ಲಾಮಟ್ಟದಲ್ಲಿ ಈ ಕಾಲೇಜುಗಳನ್ನು ತೆಗೆಯುವುದರಿಂದ ಎಷ್ಟರಮಟ್ಟಿಗೆ ಅವರಿಗೆ ಉಪಕಾರವಾಗುತ್ತದೆಂಬುದನ್ನು ಸರ್ಕಾರ ಮನಗಂಡಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಅನೇಕ ಜನ ರೈತರ ಮಕ್ಕಳಿಗೆ ಸೀಟುಗಳು ಈಗ ಸಿಗದೇ ಇರುವುದರಿಂದ, ಇನ್ನು ಮುಂದೆ ತಾಲ್ಲೂಕ್ ಲೆವೆಲ್‌ನಲ್ಲಿ ಕಾಲೇಜುಗಳನ್ನು ತೆರೆದು ಅಲ್ಲಿ ಅಗ್ರಿಕಲ್‌ಚರಲ್ ನ್ಯೂಲುಗಳನ್ನು ತೆಗೆಯುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಪ್ರತಿಯೊಂದು ಜಿಲ್ಲೆಗೆ ಒಂದೊಂದು ಅಗ್ರಿಕಲ್‌ಚರಲ್ ನ್ಯೂಲ್ ಇರಬೇಕೆಂಬುದನ್ನು ಒಪ್ಪಿಕೊಂಡು ಸರ್ಕಾರ ಅದಕ್ಕೆ ಪ್ರಯತ್ನಮಾಡುತ್ತಿದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಅಡ್ಮಿಶನ್ ಕೊಡುವಾಗ ಯೂನಿವರ್ಸಿಟಿಯಲ್ಲಿ ಸಿಕ್ಕಿದ ಮಾರ್ಕುಗಳ ಪ್ರಕಾರ ಕೊಡದೆ, ಅದಕ್ಕೆ ಪ್ರತ್ಯೇಕವಾದ ಪರೀಕ್ಷೆ ಮಾಡಿ ಕೊಡುವಂತದ್ದು ನಿಮಗೆ ಬೇಕಾದವರಿಗೆ ಸೀಟುಗಳನ್ನು ಕೊಡುವುದಕ್ಕೆ ಈ ರೀತಿ ಮಾಡುವುದಲ್ಲವೇ ?

Sri B. RACHAIAH.—I repudiate the insinuation. It was the intention of the Government to provide equal opportunities to students coming from Dharwar College Hon. Member Sharan Gowda stated the total marks required for the Dharwar College students is much more than the Hebbal College students. If a common test is held equal opportunities could be given to all the students.

ಶ್ರೀ ಬಾಪುಗೌಡ.—ಗ್ರಾಮಾಂತರ ಪ್ರದೇಶದಿಂದ ಬರುತಕ್ಕವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತೇವೆಂದು ಹೇಳಿದ್ದೀರಿ. ಹೋದ ವರ್ಷದಲ್ಲಿ ಮತ್ತು ಈ ವರ್ಷದಲ್ಲಿ ಎಷ್ಟು ಪರ್ಸೆಂಟೇಜ್ ರೂರಲ್ ಮತ್ತು ಅರ್ಬನ್ ಏರಿಯಾದವರಿಗೆ ಕೊಟ್ಟಿದ್ದೀರಿ ?

Sri B. RACHAIAH.—I require notice.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ ಜಿಲ್ಲೆಗಳಲ್ಲಿ ವ್ಯವಸಾಯ ಸ್ಕೂಲುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದೀರಿ. ಅದನ್ನು ಯಾವ ವರ್ಷದಲ್ಲಿ ಪ್ರಾರಂಭ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಯಾವ ಜಿಲ್ಲೆಯಲ್ಲಿ ಅದು ಇಲ್ಲವೋ, ಆ ಜಿಲ್ಲೆಗೆ ಆದ್ಯತೆ ಕೊಡಬೇಕೆಂದಿದ್ದೇವೆ. ಮತ್ತು ಯಾವ ಜಿಲ್ಲೆಯಲ್ಲಿ ಖಾನಗಿಯವರು ಮುಂದೆ ಬಂದು ಆರ್ಥ ಖರ್ಚು, ಭೂಮಿ ಕೊಡುತ್ತಾರೋ, ಅಲ್ಲಿ ಅತಿ ತೀವ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎನ್. ಪಾಟೀಲ್.—ಮೈಸೂರು ಸ್ಟೇಟಿನಲ್ಲಿ ಒಂದು ಅಗ್ರಿಕಲ್ಚರಲ್ ಯೂನಿವರ್ಸಿಟಿ ಇವೆ. ಆದರೆ ಬೇರೆ ಕರ್ನಾಟಕ ಯೂನಿವರ್ಸಿಟಿಯಲ್ಲಿ ಮೈಸೂರು ಯೂನಿವರ್ಸಿಟಿಯಲ್ಲಿ ಮತ್ತು ಬೆಂಗಳೂರು ಯೂನಿವರ್ಸಿಟಿಯಲ್ಲಿ ಮಾರ್ಕುಗಳು ಬೇರೆ ಬೇರೆ ವಿಧ ಇರುತ್ತವೆ. ಆದ್ದರಿಂದ ಇದನ್ನು ಯೂನಿವರ್ಸಿಟಿಮೈಸ್ ಆಗಿ ಹಂಚಿಕೆ ಮಾಡುತ್ತೀರಾ, ಅಥವಾ ಒಂದೇ ಸಮನಾಗಿ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆಗೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಇಲ್ಲಿ ಧಾರವಾಡ ಅಗ್ರಿಕಲ್ಚರಲ್ ಕಾಲೇಜು ಮತ್ತು ಹೆಬ್ಬಾಳ್ ಅಗ್ರಿಕಲ್ಚರಲ್ ಕಾಲೇಜು ಒಂದೇ ಯೂನಿವರ್ಸಿಟಿ ಅಡಳಿತಕ್ಕೆ ಒಳಪಟ್ಟಿರುವುದರಿಂದ ಬೇರೆ ಬೇರೆ ಮಾಡುವುದಕ್ಕಾಗಲಿಲ್ಲ.

Sri B. P. GANGADHAR.—In view of the fact there is a rush in the Agricultural Colleges for admission because of the reason the students do not go to the Engineering Colleges, and in view of the fact that that there is dire need for the students to be trained in agricultural science so that they could utilise their technical talent in their own agricultural fields, will you kindly consider that a condensed course of two to two and a half years is started so that these students could utilise this opportunity of getting into these courses and get trained and enrich the country by utilising technical knowledge ?

Sri B. RACHAIAH.—For giving condensed training, there are already 4 Training Institutes started in Kudligi, Arabavi, Mandya, and Gangavathi. I have already stated that agricultural schools will be started in each District and there is a proposal to start immediately one such School each at Gulbarga and another at Bellary.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—(ಬಿ) ಗೆ ಉತ್ತರವಾಗಿ 320 ಸೀಟ್ಸ್ ಎಂದು ಹೇಳಿದ್ದೀರಿ. ಹೀಗೆ ಪ್ರತಿವರ್ಷ 320 ಸೀಟ್ಸ್ ಕೊಡುತ್ತಾ ಹೋದರೆ, ನಾಲ್ಕನೆಯ ಪಂಚವಾರ್ಷಿಕ ಯೋಜನೆ ವೇಳೆಗೆ ಎಷ್ಟು ಜನ ಕಲಿತು ಹೊರಗಡೆ ಬರುತ್ತಾರೆ, ಮತ್ತು ಅವರೆಲ್ಲರಿಗೂ ಕೆಲಸ ಕೊಡುವುದಕ್ಕೆ ಅವಕಾಶವಾಗುತ್ತದೋ ?

ಶ್ರೀ ಬಿ. ರಾಚಯ್ಯ.— ಇಲ್ಲ. ಆ ಉದ್ದೇಶದಿಂದಲೇ ಆ ಸಂಖ್ಯೆಯನ್ನು ಮಿತಿಗೊಳಿಸಿದ್ದೇವೆ.

ಶ್ರೀ ಎಸ್. ಭೀಮಣ್ಣ.—ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಅಗ್ರಿಕಲ್ಚರಲ್ ಸ್ಕೂಲು ತೆಗೆಯುತ್ತೀರೆಂದು ಹೇಳಿದ್ದೀರಿ. ಅದು ಎಷ್ಟು ದಿವಸಗಳಲ್ಲಿ ತೆಗೆಯುತ್ತೀರಿ ? ಅದು ಸರ್ಕಾರದ ಕಡೆಯಿಂದ ತೆರೆಯುತ್ತೀರಾ ಅಥವಾ ಪ್ರೈವೇಟ್ ಕಡೆಯಿಂದ ತೆಗೆದು ಅದಕ್ಕೆ ಗ್ರಾಂಟು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಒಂದು ಅಗ್ರಿಕಲ್ಚರಲ್ ಸ್ಕೂಲಿಗೆ 6 ಲಕ್ಷ ರೂಪಾಯಿಗಳು ಖರ್ಚು ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಯಾವ ಜಿಲ್ಲೆಯಲ್ಲಿ ಅಗ್ರಿಕಲ್ಚರಲ್ ಸ್ಕೂಲು ಇಲ್ಲವೋ ಅಂಥಾ ಕಡೆ ಖಾನಗಿಯವರು ಮುಂದೆ ಬಂದು 3 ಲಕ್ಷ ರೂಪಾಯಿಗಳ ಖರ್ಚು ಮತ್ತು ಭೂಮಿಯನ್ನು ಕೊಡುತ್ತಾರೆಯೋ ಅಂಥಾ ಕಡೆಗೆ ಪ್ರಯಾರಿಟಿ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ತಾವು ಈ ಸೀಟುಗಳನ್ನು ಜಿಲ್ಲಾವಾರು ಹಂಚಿಕೆ ಮಾಡುವುದರಿಂದ ಯಾವ ಯಾವ ಜಿಲ್ಲೆಗೆ ಕಡಿಮೆ ಸೀಟುಗಳು ಸಿಕ್ಕಿವೆಯೋ ಅಂಥಾ ಕಡೆ ಪ್ರಜಾ ಸಂಖ್ಯೆಗನುಗುಣವಾಗಿ ಸೀಟುಗಳನ್ನು ಹಂಚುವಂಥಾ ವ್ಯವಸ್ಥೆಯನ್ನು ಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ನಾವು ಜಿರ್ಲಾವಾರು ಸೀಟುಗಳನ್ನು ಹಂಚುತ್ತಾ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಹಳ್ಳಿಗಾಡಿನಲ್ಲಿರತಕ್ಕ ರೈತರ ಮಕ್ಕಳಿಗೆ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಹೆಚ್ಚಿನ ಪ್ರವೇಶಾವಕಾಶವನ್ನು ದೊರಕಿಸುವ ದೃಷ್ಟಿಯಿಂದ ತಮ್ಮ ರೂಲ್ಸ್‌ಅನ್ನು ಸ್ವಲ್ಪ ಬದಲಾವಣೆ ಮಾಡುತ್ತೀರಾ ! ಮತ್ತು ನಮ್ಮ ನೆರೆರಾಜ್ಯವಾದ ಮದ್ರಾಸ್ ರಾಜ್ಯದಲ್ಲಿ ಜಿರ್ಲಾವಾರು ಸೀಟುಗಳನ್ನು ಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಆದ್ದರಿಂದ ಅದೇ ತರಹ ಇಲ್ಲಿಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಮ್ಮ ಮೈಸೂರು ಹೈಕೋರ್ಟ್‌ನವರು ಜಿರ್ಲಾವಾರು ಸೀಟು ರಿಜರ್ವೇಷನ್ ಮಾಡುವುದು ತಪ್ಪಾಗುತ್ತದೆ, ಅದು ರಾಜ್ಯಾಂಗಕ್ಕೆ ವಿರೋಧ ಎಂದು ತೀರ್ಮಾನ ಕೊಟ್ಟಿರುವುದರಿಂದ ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿರತಕ್ಕ ಅನೇಕ ಪಾಲಿಟೆಕ್ನಿಕ್ ಸ್ಕೂಲು ಮತ್ತು ಕಾಲೇಜುಗಳಿಗೆ ಸಾಕಷ್ಟು ವಿದ್ಯಾರ್ಥಿಗಳು ಹೋಗದೆ ಅವುಗಳು ಖಾಲಿ ಇರುವುದರಿಂದ ಆ ಸ್ಕೂಲುಗಳಲ್ಲಿ ಅಗ್ರಿಕಲ್ಚರ್ ಡಿಪ್ಲೊಮಾ ಕೋರ್ಸ್ ಅನ್ನು ತೆಗೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಎಲ್ಲಾ ಕಡೆಗಳಲ್ಲೂ ಪಾಲಿಟೆಕ್ನಿಕ್ ಸ್ಕೂಲುಗಳನ್ನು ಕ್ಲೋಜ್‌ಮಾಡಿ ಅಗ್ರಿಕಲ್ಚರ್ ಡಿಪ್ಲೊಮಾಕೋರ್ಸ್ ತೆಗೆಯುವುದಕ್ಕಾಗುವುದಿಲ್ಲ.

QUESTIONS FOR ANSWERS ON THE DAY

(but not taken up)

Kanakanal Tank at Indi Taluk

377. Sri S. S. ARAKERI (Balloli).—

Will the Minister of State for Minor Irrigation be pleased to state :—

(*a*) the total estimate of Kanakanal Tank at Indi taluk in Bijapur Distsict ;

(*b*) the total acres of land proposed to be irrigated ;

(*c*) when the work will be commenced actually ?

Sri A. J. DODDAMETI (Minister of State for Minior Irrigation).—

(*a*) Fresh Plans and Estimates are under preparation in the Department.

(*b*) Does not arise in view of reply to clause (*a*).

(*c*) Does not arise in view of reply to clause (*a*)